24	ರಾಯಚೂರು	24	397	1351	2313
25	ರಾಮನಗರ	0	528	1580	2313
26	ಶಿವಮೊಗ್ಗ	19	432	635	4892
27	ತುಮಕೂರು	92	1089	1128	13132
28	ಉತ್ತರ ಕನ್ನಡ	36	20	152	403
29	ಉಡುಪಿ	0	273	494	558
	ಒಟ್ಟು	**2205**	**8436**	**16895**	**67813**
					95349

ಕೆ.ಪಿ.ಎ.ಡಿ.ಐ ಯಿಂದ ಮೈಸೂರಿಲ್ಲಿ ಭೂಸ್ವಾಧೀನ

85 (547) ಶ್ರೀ ಪುಟ್ಟರಾಜು ಪಿ.ಎಸ್. (ಮೇಲುಕೋಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿ, ಮೈದನಹಳ್ಳಿ, ಇಲವಾಲ ಮತ್ತು ಕೂರ್ಗಳ್ಳಿ ಗ್ರಾಮಗಳಿಗೆ ಸೇರಿದ ಜಮೀನುಗಳನ್ನು ಕೆ.ಐ.ಎ.ಡಿ.ಬಿ. ಯವರು ಕೈಗಾರಿಕಾಭಿವೃದ್ಧಿಗಾಗಿ ವಶಪಡಿಸಿ ಕೊಂಡ ಜಮೀನಿನ ವಿಸ್ತೀರ್ಣವೆಷ್ಟು; (ಸರ್ವೆ ನಂಬರ್‌ನ ಸಹಿತ ಮಾಹಿತಿ (ನೀಡುವುದು);

ಆ) ಅಂತಿಮ ಅಧಿಸೂಚನೆ ಹೊರಡಿಸುವಾಗ ಕೈಬಿಡಲಾದ ಜಮೀನಿನ ವಿಸ್ತೀರ್ಣವೆಷ್ಟು; (ಸರ್ವೆ ನಂಬರ್‌ನ ವಿಸ್ತೀರ್ಣದ ಮಾಹಿತಿ ನೀಡುವುದು);

ಇ) ವಶಪಡಿಸಿಕೊಳ್ಳಲಾದ ಜಮೀನುಗಳನ್ನು ಕೈಬಿಡಲು ಕಾರಣಗಳೇನು (ಮಾಹಿತಿ ನೀಡುವುಉ);

ಈ) ಜಮೀನುದಾರರಿಗೆ ಎಷ್ಟು ಪರಿಹಾರವನ್ನು ನೀಡಲಾಗಿದೆ; (ಸರ್ವೆ ನಂಬರ್ ವಾರು ಹಾಗೂ ವಿಸ್ತೀರ್ಣವಾರು ಮಾಹಿತಿ ನೀಡುವುದು);

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿ, ಮೈದನಹಳ್ಳಿ, ಇಲವಾಲ ಮತ್ತು ಕೂರ್ಗಳ್ಳಿ ಗ್ರಾಮಗಳಲ್ಲಿ ಒಟ್ಟು

1047–16 ಎಕರೆ ಜಮೀನನ್ನು ಕೆ.ಐ.ಎ.ಡಿ.ಯಿಂದ ಕೈಗಾರಿಕಾಭಿವೃದ್ಧಿಗಾಗಿ ಭೂಸ್ವಾಧೀನಪಡಿಸಲಾಗಿದೆ. ವಿವರ ಈ ಕೆಳಕಂಡಂತಿದೆ:

ಗ್ರಾಮದ ಹೆಸರು	ಪ್ರಾಥಮಿಕ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	ವಿಸ್ತೀರ್ಣ (ಎ–ಗುಂ)
ಕೂರ್ಗಳ್ಳಿ	ಸಿಐ 30 ಎಸ್ ಪಿಕ್ಯೂ 2006 ದಿನಾಂಕ: 18.03.2006	606–10
ಇಲವಾಲ ಮೈದನಹಳ್ಳಿ	ಸಿಐ 222 ಎಸ್‌ಪಿಕ್ಯೂ 2006 ದಿನಾಂಕ: 06.10.2006	441–06
ಒಟ್ಟು		**1047–16**

ಆ) ಅಂತಿಮ ಅಧಿಸೂಚನೆ ಹೊರಡಿಸುವುದಕ್ಕೆ ಮೊದಲ ಮತ್ತು ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಮೈದನಹಳ್ಳಿ ಇಲವಾಲ ಮತ್ತು ಕೂರ್ಗಳ್ಳಿ ಗ್ರಾಮಗಳಲ್ಲಿ ಒಟ್ಟು 142–16 ಎಕರೆ ಜಮೀನನ್ನು ಭೂಸ್ವಾಧೀನ ಕ್ರಮದಿಂದ ಕೈಬಿಟ್ಟು, ಕಲಂ 4ರ ಅಧಿಸೂಚನೆ ಹೊರಡಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ:

ಗ್ರಾಮದ ಹೆಸರು	ಕಲಂ 4ರ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	ವಿಸ್ತೀರ್ಣ (ಎ–ಗುಂ)
ಇಲವಾಲ	ಸಿಐ 269 ಎಸ್‌ಪಿಕ್ಯೂ 2007 ದಿನಾಂಕ: 05.10.2007	130–28
ಕೂರ್ಗಳ್ಳಿ	ಸಿಐ 317 ಎಸ್‌ಪಿಕ್ಯೂ 2006 ದಿನಾಂಕ: 05.12.2006	11–28
ಒಟ್ಟು		**142–16**

ಅಂತಿಮ ಅಧಿಸೂಚನೆ ಹೊರಡಿಸುವಾಗ ಭೂಸ್ವಾಧೀನ ಕ್ರಮದಿಂದ ಕೈಬಿಡಲಾದ ವಿವರಗಳನ್ನು ಅನುಬಂಧ–2 ರಲ್ಲಿ ನಮೂದಿಸಿದೆ.

ಇ) ವಶಪಡಿಸಿಕೊಳ್ಳಲಾದ ಜಮೀನುಗಳು ಅಭಿವೃದ್ಧಿ ಹೊಂದಿದ್ದು, ಮತ್ತು ಆಯಕಟ್ಟಿಗೆ ಅನುಗುಣವಾಗಿಲ್ಲವಾದ ಕಾರಣ ಭೂಸ್ವಾಧೀನದಿಂದ ಕೈಬಿಡಲಾಗಿದೆ.

ಇ) ಮಂಡಳಿಯಿಂದ ಕೈಗಾರಿಕಾ ಪ್ರದೇಶಕ್ಕೆ ಭೂಸ್ವಾಧೀನ ಪಡಿಸಿರುವ ಒಟ್ಟು 544–16 ಎಕರೆ ಜಮೀನಿಗೆ ಎಕರೆಯೊಂದಕ್ಕೆ ರೂ.17.00 ಲಕ್ಷ ಮತ್ತು ರೂ.17.50 ಲಕ್ಷದಂತೆ ದಿನಾಂಕ: 06.09.2007 ರಂದು ನಡೆದ ಮಂಡಳಿಯ 282ನೇ ಸಭೆಯಲ್ಲಿ ಒಪ್ಪಂದದ ದರದಲ್ಲಿ ದರ ನಿಗದಿ ಪಡಿಸಲಾಗಿದ್ದು ಅದರಂತೆ ಈ ತಹಲ್‌ವರೆವಿಗೂ ಒಟ್ಟೂ ರೂ.38.82.60 ಪರಿಹಾರವನ್ನು ಪಾವತಿ ಮಾಡಲಾಗಿದೆ.

ಇಲವಾಲ ಮತ್ತು ಮೈದನಹಳ್ಳಿ ಗ್ರಾಮಗಳ ಜಮೀನುಗಳಿಗೆ ಸಂಬಂಧಿಸಿದಂತೆ ಭೂಮಾಲೀಕರು ಭೂಸ್ವಾಧೀನ ಕ್ರಮವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು ಮಾನ್ಯ ನ್ಯಾಯಾಲಯವು ತಡೆಯಾಜ್ಞೆ ನೀಡಿ ಮಧ್ಯಂತರ ಆದೇಶ ಹೊರಡಿಸಿರುವುರಿಂದ ದರ ನಿಗದಿಯಾಗಿರುವುದಿಲ್ಲ ಮತ್ತು ಪರಿಹಾರ ಸಹ ಪಾವತಿ ಮಾಡಿರುವುದಿಲ್ಲ.

ಅನುಬಂಧ – III

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಕಾಮಗಾರಿಗಳಿಗೆ ಅನುದಾನ ಬಿಡುಗಡೆ

569 (277) ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09 ಹಾಗೂ 2009–10 ಸಾಲಿನಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ಸಣ್ಣ ನೀರಾವರಿ ಇಲಾಖೆಯ ವಿಭಾಗದಲ್ಲಿ ಇಲಾಖೆಯ ವತಿಯಿಂದ ಯಾವ ಯಾವ ಕಾರ್ಯಕ್ರಮಗಳಲ್ಲಿ (ಲೆಕ್ಕ ಶೀರ್ಷಿಕೆ) ಎಷ್ಟು ಅನುದಾನವನ್ನು ಯಾವ ಕಾಮಗಾರಿಗಳಿಗೆ ಒದಗಿಸಲಾಗಿದೆ;

ಅ) ಬಿಡುಗಡೆಯಾದ ಅನುದಾನದಲ್ಲಿ ಎಷ್ಟು ವೆಚ್ಚವಾಗಿದೆ;

ಇ) ಪ್ರಸ್ತುತ ಕಾಮಗಾರಿಗಳು ಯಾವ ಯಾವ ಹಂತದಲ್ಲಿವೆ (ಕಾಮಗಾರಿವಾರು ವಿವರ ನೀಡುವುದು);

ಇ) ಕಾಮಗಾರಿಗಳು ವಿಳಂಬವಾಗಲು ಕಾರಣಗಳೇನು ಹಾಗೂ ಈ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಿದೆ?